**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 4/23**

**ಸಿ.ಡಬ್ಲ್ಯೂ-3 ಪಿ.ಡಬ್ಲ್ಯೂ-3**

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟರಮಣನಾಯಕ |
| ತಂದೆಯ/ ಗಂಡನ ಹೆಸರು | : | ಅಂಕನಾಯಕ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಹೊಸ ಬೀರಹಳ್ಳಿ |

**ದಿನಾಂಕ 18.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ಮತ್ತು 2 ರವರಿಗೂ ಆರೋಪಿತರಿಗೂ 3 ವರ್ಷಗಳ ಹಿಂದೆ ಗಲಾಟೆ ಆಗಿರುತ್ತದೆ. ಆರೋಪಿತರು ಪಕ್ಕದ ಜಮೀನವರು. ಆರೋಪಿತರು ಚಾಸಾ 1 ಮತ್ತು 2 ರವರ ಜಮೀನಿನಲ್ಲಿ ಕಲ್ಲು ಕಂಬ ಕಿಳುತ್ತಿದ್ದಾರೆ ಎಂದು ನಾನು ಚಾಸಾ 1 ರವರಿಗೆ ತಿಳಿಸಿರುತ್ತೇನೆ. ಆಗ ಚಾಸಾ 1 ರವರು ಜಮೀನು ಬಳಿ ಹೋಗಿರುತ್ತಾರೆ. ಚಾಸಾ 1 ರವರಿಗೆ ಆರೋಪಿ 1 ಮತ್ತು 2 ರವರು ಮಚ್ಚು ಮತ್ತು ದೊಣ್ಣೆಯಿಂದ ತಲೆಗೆ ಹೊಡೆದಿರುತ್ತಾರೆ. ಸುಮಾರು 50 ತಂತಿ ಕಂಬಗಳನ್ನು ಒಡೆದಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

**<u>ಪಾಟೀ ಸವಾಲುಃ  ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ದಿಃ30.06.2022 ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಸರ್ವೇ ನಂ 4 ರ ಜಮೀನಿಗೆ ಆರೋಪಿತರು ಅತಿಕ್ರಮ ಪ್ರವೇಶ ಮಾಡಿ ಸುಮಾರು 30 ಸಾವಿರ ನಷ್ಟ ಉಂಟು ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 3 ಮತ್ತು 4 ರವರ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ 2 ರವರಿಗೆ ಆರೋಪಿ 2 ರವರು ದೊಣ್ಣೆಯಿಂದ ಬಲ ಪಕ್ಕೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಮುದ್ದೆಮಾಲು 1 ರಿಂದ 3 ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ</u>**

ಚಾಸಾ 1 ಮತ್ತು 2 ನನ್ನ ಸಹೋದರರು. ಸದರಿ ದಿನ 11.30 ಸಮಯದಲ್ಲಿ ನಾನು ಜಮೀನಿನಲ್ಲಿ ಕಳೆ ತೆಗೆಯುತ್ತಿದ್ದೆ. ಸದರಿ ಸಮಯದಲ್ಲಿ ಅಕ್ಕ ಪಕ್ಕದ ಜಮೀನಿನವರು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಮಂಚನಾಯಕ ರವರು ಇದ್ದು ಅವರು ತೀರಿಹೋಗಿರುತ್ತಾರೆ. ಜಮೀನಿಂದ ಊರಿಗೆ ಅರ್ಧ ಕಿ.ಮೀ ಆಗುತ್ತದೆ. ನಾನು ಮನೆಗೆ ಬಂದಾಗ 11.30 ಆಗಿತ್ತು. ಆರೋಪಿ 1 ರವರು OS 188/20ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ತೊಂದರೆ ಕೊಡಬಾರದು ಎಂದು ಆದೇಶ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರರ ವಿರುದ್ಧ ಆರೋಪಿತರು ದೂರು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಯಾವುದೇ ಗಲಾಟೆ ಆಗದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮಚ್ಚು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ಮತ್ತು 2 ನ್ನು  ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**